# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 40

ಸ್ವಾಮಿ ನಿತ್ಯಸ್ಥಾನಂದ


### ಭೋಗಾಸಕ್ತಿ

ಶ್ರೀರಾಮಕೃಷ್ಣರು: ‘‘ಒಂಟೆಗೆ ನೆಗ್ಗಲು ಮುಳ್ಳು ಎಂದರೆ ಬಹಳ ಪ್ರೀತಿ. ಅದನ್ನು ಅಧಿಕವಾಗಿ ತಿಂದಂತೆಲ್ಲ ಅದರ ಬಾಯಿಂದ ರಕ್ತ ಸುಮ್ಮನೆ ಧಾರಾಕಾರವಾಗಿ ಹರಿಯಲಾರಂಭಿಸುತ್ತದೆ. ಆದರೂ ಅದಕ್ಕೆ ಆ ಮುಳ್ಳು ಬೇಕು. ಅದನ್ನು ತಿನ್ನುವುದನ್ನು ಎಂದಿಗೂ ಬಿಡದು. ಸಂಸಾರಿಗಳು ಬಹಳವಾಗಿ ಶೋಕ, ತಾಪ ಇವುಗಳಿಂದ ಬೆಂದು ಬೆಂಡಾಗುತ್ತಾರೆ. ಆದರೂ ಕೆಲವು ದಿನಗಳಲ್ಲೇ ಎಲ್ಲವನ್ನೂ ಮರೆತು ಎಂದಿನ ಮೂರ್ತಿಗಳೇ ಆಗಿಬಿಡುತ್ತಾರೆ. ಹೆಂಡತಿ ಸತ್ತುಹೋಗಿಬಿಟ್ಟಳು, ಅಥವಾ ಬೇರೊಬ್ಬನನ್ನು ಕಟ್ಟಿಕೊಂಡು ಹೋಗಿಬಿಟ್ಟಳು ಅಂತ ಇಟ್ಟುಕೊ. ಆದರೂ ಆತ ಮತ್ತೆ ವಿವಾಹವಾಗುತ್ತಾನೆ.’’ *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೨೨)*

ಒಂಟೆ ಮುಳ್ಳಿನ ಗಿಡ ತಿನ್ನುವುದಕ್ಕೆ ವೇದಾಂತಿಕ ಅರ್ಥವೂ ಇದೆ. ಒಂಟೆಗೆ ಮುಳ್ಳಿನ ಗಿಡ ಏಕೆ ಇಷ್ಟವಾಗುತ್ತದೆ ಎಂದರೆ, ಅದು ತನ್ನ ರಕ್ತವನ್ನೇ ಕುಡಿದು ಆನಂದಿಸುತ್ತದೆ. ಆದರೆ ಅಜ್ಞಾನದಿಂದಾಗಿ ಆ ಗಿಡವೇ ರುಚಿಯಾಗಿರುವುದು ಎಂದು ಭ್ರಮಿಸುತ್ತದೆ. ಹಾಗೆಯೇ ನಾವು ಇಂದ್ರಿಯ ವಿಷಯಾನಂದವನ್ನು ಅನುಭವಿಸುತ್ತಿರುವಾಗಲೂ ಆತ್ಮನ ಆನಂದವನ್ನೇ ಅನುಭವಿಸುತ್ತಿರುತ್ತೇವೆ. ಆಸೆಯು ಒಂದು ರೀತಿಯ ಬಿಗಿತ (tension). ಆಸೆಯು ಪೂರ್ತಿಯಾಗುವ ಸಂದರ್ಭದಲ್ಲಿ ಮನಸ್ಸು ಬಿಗಿತದಿಂದ ಮುಕ್ತವಾಗುತ್ತದೆ, ಮತ್ತು ಆಗ ಮನಸ್ಸು ಶಾಂತವಾಗುತ್ತದೆ. ಆ ತಾತ್ಕಾಲಿಕ ಶಾಂತ ಸ್ಥಿತಿಯಲ್ಲಿ ಆತ್ಮಾನಂದವು ಹೊರಸೂಸುತ್ತದೆ. ಇದನ್ನೇ ನಾವು ವಿಷಯಾನಂದವೆಂದು ಭ್ರಮಿಸುತ್ತೇವೆ, ಮತ್ತು ಇಂದ್ರಿಯ ವಿಷಯಗಳ ವಶರಾಗಿ ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ. ಭರ್ತೃಹರಿಯು ಹೇಳುವಂತೆ:

**ಭೋಗಾ ನ ಭುಕ್ತಾ ವಯಮೇವ ಭುಕ್ತಾಃ**
**ತೃಷ್ಣಾ ನ ಜೀರ್ಣಾ ವಯಮೇವ ಜೀರ್ಣಾಃ।**
**ಕಾಲೋ ನ ಯಾತಾ ವಯಮೇವ ಯಾತಾಃ**
**ತಪೋ ನ ತಪ್ತಾ ವಯಮೇವ ತಪ್ತಾಃ॥**

‘‘ಭೋಗವನ್ನು ಭುಂಜಿಸುವುದಿಲ್ಲ , ಭೋಗವೇ ನಮ್ಮನ್ನು ನುಂಗಿಹಾಕುತ್ತದೆ. ಆಸೆಗಳು ಕ್ಷೀಣಿಸುವ ಬದಲು ನಾವೇ ಕ್ಷೀಣಿಸುತ್ತಿದ್ದೇವೆ. ಕಾಲ ಕಳೆಯುವ ಬದಲು ನಾವೇ ಕಳೆದುಹೋಗುತ್ತಿದ್ದೇವೆ. ನಾವು ತಪಸ್ಸನ್ನು ಆಚರಿಸುವುದಿಲ್ಲ, ನಾವೇ ತಪಿಸಲ್ಪಡುತ್ತಿದ್ದೇವೆ.’’



### ಮಂದ ಮತ್ತು ತೀವ್ರ ವೈರಾಗ್ಯ

**ವಿಜಯ:** ‘‘ಬದ್ಧಜೀವನ ಮನಸ್ಸು ಯಾವ ಅವಸ್ಥೆಯನ್ನು ಮುಟ್ಟಿದರೆ ಅವನಿಗೆ ಮುಕ್ತಿ ದೊರಕಬಹುದು?’’

**ಶ್ರೀರಾಮಕೃಷ್ಣರು:** ‘‘ಭಗವಂತನ ಕೃಪೆಯಿಂದ ಆತನಲ್ಲಿ ತೀವ್ರ ವೈರಾಗ್ಯ ಉಂಟಾದ್ದೇ ಆದರೆ, ಆಗ ಆತ ಕಾಮಕಾಂಚನಾಸಕ್ತಿಯಿಂದ ಮುಕ್ತನಾಗಬಲ್ಲ. ಯಾವುದಕ್ಕೆ ತೀವ್ರ ವೈರಾಗ್ಯ ಅಂತ ಹೆಸರು? ಮಂದ ವೈರಾಗ್ಯವಿರುವವನು ಹೇಳುತ್ತಾನೆ: ‘ಎಲ್ಲ ಸಕಾಲಕ್ಕೆ ನಿಧಾನವಾಗಿ ಬರಲಿ; ಈಗ ಸದ್ಯ ನಾನು ಸುಮ್ಮನೆ ಭಗವಂತನ ನಾಮಜಪ ಮಾಡುತ್ತಿರುತ್ತೇನೆ.’ ಆದರೆ ಯಾರಲ್ಲಿ ತೀವ್ರ ವೈರಾಗ್ಯ ಉಂಟಾಗಿದೆಯೋ, ಆತ, ಹೇಗೆ ತಾಯಿ ತನ್ನ ಮಗುವಿಗಾಗಿ ವ್ಯಾಕುಲಳಾಗಿರುತ್ತಾಳೊ ಹಾಗೆಯೇ ಭಗವಂತನಿಗಾಗಿ ಬಹಳವಾಗಿ ವ್ಯಾಕುಲಪಡುತ್ತಿರುತ್ತಾನೆ. ತೀವ್ರ ವೈರಾಗ್ಯವುಳ್ಳವನಿಗೆ ಭಗವಂತನ ಹೊರತು ಇನ್ನು ಏನೂ ಬೇಕೆನಿಸುವುದಿಲ್ಲ. ಆತನಿಗೆ ಈ ಸಂಸಾರ ಒಂದು ದೊಡ್ಡ ಬಾವಿಯ ಹಾಗೆ ಕಾಣುತ್ತದೆ; ಅನ್ನಿಸುತ್ತದೆ, ಇದರಲ್ಲಿ ಮುಳುಗಿಬಿಡುತ್ತೇನಲ್ಲ ಎಂಬುದಾಗಿ. ಸ್ವಬಾಂಧವರು ಕಾಲಸರ್ಪಗಳ ಹಾಗೆ ಕಂಡುಬರುತ್ತಾರೆ. ಅವರಿಂದ ತಪ್ಪಿಸಿಕೊಂಡು ಓಡಿ ಹೋಗಲು ಇಚ್ಛೆಯಾಗುತ್ತದೆ. ಆತ ಕೊನೆಗೆ ಓಡಿಯೂ ಹೋಗುತ್ತಾನೆ. ‘ಮನೆಯಲ್ಲಿ ಸುವ್ಯವಸ್ಥೆ ಮಾಡಿಬಿಟ್ಟು ಬಳಿಕ ಭಗವಚ್ಚಿಂತನೆ ಮಾಡೋಣ’ ಎಂದು ಆತ ಎಂದಿಗೂ ಯೋಚಿಸುವುದೇ ಇಲ್ಲ. ಆಂತರ್ಯದಲ್ಲಿ ಆತನಿಗೆ ಒಳ್ಳೇ ಬಲ ಇದೆ.’’ *(ಅಲ್ಲೇ, ಪು. ೧೨೨)*

ಭಗವಂತನ ಮೇಲೆ ಈ ಪ್ರಪಂಚದ ಮುಸುಕಿದೆ, ಈ ಮುಸುಕನ್ನು ತೆಗೆಯುವ ಪ್ರಯತ್ನವೇ ವೈರಾಗ್ಯ. ವೈರಾಗ್ಯದಲ್ಲಿಯೂ ವಿವಿಧ ಹಂತಗಳಿವೆ. ಮೊದಲನೆಯ ಹಂತ ಪ್ರಾಪಂಚಿಕ ವಿಷಯ ತ್ಯಾಗ – ಶ್ರೀರಾಮಕೃಷ್ಣರು ಹೇಳುವಂತೆ, ಕಾಮ-ಕಾಂಚನ-ತ್ಯಾಗ. ಇವುಗಳನ್ನು ತ್ಯಜಿಸಿ ಮುಂದುವರಿದಂತೆ ಹೆಸರು ಕೀರ್ತಿ, ಮಾನ್ಯತೆ ಮುಂತಾದವುಗಳ ಆಕರ್ಷಣೆಗೆ ಸಾಧಕ ಒಳಗಾಗುತ್ತಾನೆ. ಸ್ವಾಮಿ ವಿವೇಕಾನಂದರು ಮಿಲ್ಟನ್ನನ ಒಂದು ಹೇಳಿಕೆಯನ್ನು ಉದ್ಧರಿಸುತ್ತಾರೆ: ''Fame... that last infirmity of noble mind.'' *(CW., 7.231)* (ಕೀರ್ತಿಯೆಂಬುದು ಉದಾತ್ತ ಮನಸ್ಸಿನ ಕೊನೆಯ ದೌರ್ಬಲ್ಯ.) ಇದನ್ನು ದಾಟಿದನೆಂದರೆ ಸಾಧಕನಿಗೆ ಸತ್ಯ ದೊರಕಿದಂತೆಯೇ. ಸಂಸ್ಕೃತ ಸುಭಾಷಿತ ಶ್ಲೋಕವೊಂದಿದೆ:

**ಕುಲಂ ವಿತ್ತಂ ಶ್ರುತಂ ರೂಪಂ ಶೌರ್ಯಂ ದಾನಂ ತಪಸ್ತಥಾ ।**
**ಪ್ರಾಧಾನ್ಯೇನ ಮನುಷ್ಯಾಣಾಂ ಸಪ್ತೈತೇ ಮದಹೇತವಃ ॥**

''ಕುಲ, ಸಂಪತ್ತು, ಪಾಂಡಿತ್ಯ, ಸುಂದರರೂಪ, ಪರಾಕ್ರಮ, ದಾನ ಮತ್ತು ತಪಸ್ಸು – ಈ ಏಳು ಸಾಮಾನ್ಯವಾಗಿ ಮನುಷ್ಯನ ಮದಕ್ಕೆ ಕಾರಣವಾಗುತ್ತವೆ.'' ಶ್ರೀರಾಮಕೃಷ್ಣರು ಕುಲಾಭಿಮಾನವನ್ನು ತ್ಯಜಿಸಲು ಕೊಳಚೆ ಪ್ರದೇಶವನ್ನು ಶುಚಿಮಾಡುತ್ತಿದ್ದರು. ಯಾವುದೇ ಸಂಪತ್ತನ್ನೂ ಅವರಿಗೆ ಸ್ಪರ್ಶಿಸಲೂ ಆಗುತ್ತಿರಲಿಲ್ಲ. ಅವರಲ್ಲಿ ಪಾಂಡಿತ್ಯಾಭಿಮಾನವಂತೂ ದೂರದ ಮಾತು. ಕೆಲವೊಮ್ಮೆ ಆಧ್ಯಾತ್ಮಿಕ ಭಾವದಲ್ಲಿರುವಾಗ ಅತ್ಯಂತ ಸುಂದರವಾಗಿ ಅವರು ಕಾಣಿಸುತ್ತಿದ್ದರಂತೆ, ಆಗ ಜನರು ಆಕರ್ಷಿತರಾಗಿ ಅವರನ್ನು ಮುತ್ತಿಕೊಳ್ಳುತ್ತಿದ್ದರಂತೆ. ಅಗ ಅವರು ಜನರಿಂದ ದೂರವಾಗುತ್ತಿದ್ದರು, 'ಈ ಸೌಂದರ್ಯವನ್ನು ಹಿಂತೆಗೆದುಕೊ' ಎಂದು ಜಗನ್ಮಾತೆಯನ್ನು ಕಳಕಳಿಯಿಂದ ಪ್ರಾರ್ಥಿಸುತ್ತಿದ್ದರು. ಅವರು ತಮ್ಮ ಆಧ್ಯಾತ್ಮಿಕ ಪರಾಕ್ರಮದಿಂದ ಇಡೀ ಜಗತ್ತನ್ನು ಗೆದ್ದವರು. ಅವರು ಕೊಡುಗೈ ದಾನಿಗಳು – ಆದರೆ ಆಧ್ಯಾತ್ಮಿಕವಾಗಿ. ಈ ದಾನವು ಮದಕ್ಕೆ ವಿರುದ್ಧವಾದುದು. ಶ್ರೀರಾಮಕೃಷ್ಣರ ತಪಸ್ಸು ಭಗವಂತನನ್ನು ಪಡೆಯುವುದಕ್ಕಾಗಿ – ತಾನೊಬ್ಬ ತಪಸ್ವಿಯಾಗಿ ಮೆರೆಯುವುದಕ್ಕಾಗಿ ಅಲ್ಲ. ಅವರು ಹೆಸರು-ಕೀರ್ತಿಗಳನ್ನು ಅತ್ಯಂತ ತುಚ್ಛವಾಗಿ ಪರಿಗಣಿಸುತ್ತಿದ್ದರು. ಎರಿಕ್ ಫ್ರಾಂ ಹೇಳುತ್ತಾರೆ: 'If the meaning of life has become doubtful, if one's relation to others and to onself do not offer security, then fame is one means to silence one's doubt.' *(Escape from Freedom ಪು.೬೬)* — ''ವ್ಯಕ್ತಿಯ ಜೀವನದ ಅರ್ಥವೇ ಸಂದೇಹಾಸ್ಪದವಾದಾಗ, ಇತರರೊಡನೆ ಮತ್ತು ತನ್ನೊಡನೆ ಇರುವ ಸಂಬಂಧವು ಸುರಕ್ಷತೆಯನ್ನು ನೀಡದಿದ್ದಾಗ ಹೆಸರು – ಕೀರ್ತಿಯು ಆ ಸಂದೇಹವನ್ನು ಸದ್ದಡಗಿಸುವ ಸಾಧನವಾಗುತ್ತದೆ.''

ಮೂರನೆಯ ಹಂತದ ತ್ಯಾಗವೇ ಸ್ವ-ಇಚ್ಛಾ ತ್ಯಾಗ. ಎಲ್ಲವನ್ನೂ ತ್ಯಾಗ ಮಾಡಿದ ಮೇಲೆಯೂ ತನ್ನ ಇಚ್ಛೆಯಂತೆಯೇ ನಡೆಯಬೇಕು, ತನ್ನ ಅಭಿಪ್ರಾಯವೇ ಮುಖ್ಯ, ಇತರರ ಅಭಿಪ್ರಾಯವನ್ನು ಸ್ವೀಕರಿಸುವ, ಮೆಚ್ಚುವ ಔದಾರ್ಯದ ಕೊರತೆ – ಇಂತಹ ಮನೋಭಾವವನ್ನು ಸರ್ವಸಂಗ ಪರಿತ್ಯಾಗಿಯಲ್ಲಿಯೂ ಕಾಣಬಹುದು.

ಶ್ರೀರಾಮಕೃಷ್ಣರು ಮುಂದುವರಿದು, ತೀವ್ರ ವೈರಾಗ್ಯವು ಹೇಗಿರುತ್ತದೆ ಎಂಬುದನ್ನು ಇಬ್ಬರು ರೈತರ ಕತೆಯ ಮೂಲಕ ಚಿತ್ರಿಸುತ್ತಾರೆ *(ನೋಡಿ, ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೨೩).* ಒಬ್ಬ ರೈತನು ಅನಾವೃಷ್ಟಿಯ ಕಾಲದಲ್ಲಿ ಬೆಳಗಿನಿಂದ ಸಂಜೆಯವರೆಗೂ ಸ್ವಲ್ಪವೂ ಬಿಡುವಿಲ್ಲದೆ ಕೆಲಸ ಮಾಡಿ, ಕಾಲುವೆ ತೋಡಿ, ನದಿಗೂ ತನ್ನ ಹೊಲಕ್ಕೂ ಸಂಪರ್ಕವನ್ನು ಕಲ್ಪಿಸುತ್ತಾನೆ. ನೆರೆಯ ಇನ್ನೊಬ್ಬ ರೈತನಿಗೆ, ತೀವ್ರತೆಯ ಕೊರತೆಯಿಂದಾಗಿ, ಶ್ರಮಪಡಲಾಗದೆ ತನ್ನ ಹೊಲಕ್ಕೆ ನೀರು ಹಾಯಿಸಲಾಗಲೇ ಇಲ್ಲ. ನದಿಗೂ ಹೊಲಕ್ಕೂ ಸಂಪರ್ಕವನ್ನು ಕಲ್ಪಿಸುವಂತೆ ಪರಮಾತ್ಮನಿಗೂ ಜೀವಾತ್ಮನಿಗೂ ಸಂಪರ್ಕವನ್ನು ಕಲ್ಪಿಸಬೇಕು. ವೈರಾಗ್ಯವೇ ಕಾಲುವೆ, ಅಗೆಯುವ ಕ್ರಿಯೆಯೇ ವಿವೇಕ, ಗುದ್ದಲಿ ಹಾರೆ ಪಿಕಾಸಿ ಮುಂತಾದವುಗಳು ಯಮ-ನಿಯಮಾದಿಗಳು.

ವಿಜಯನು ಹಿಂದೆ ಬಹಳವಾಗಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದ, ಆದರೆ ಈಗ ಬರುವುದು ಕಡಿಮೆಯಾಗಿದೆ.ಇದರ ಸಂಬಂಧವಾಗಿ ಶ್ರೀರಾಮಕೃಷ್ಣರು ವಿಚಾರಿಸಿದಾಗ ವಿಜಯ ಹೇಳಿದ: ''ನನಗೇನೋ ಬರಬೇಕು ಎಂಬುದಾಗಿ ಬಹಳ ಇಚ್ಛೆ ಇದೆ. ಆದರೆ ನಾನು ಸ್ವತಂತ್ರನಲ್ಲ. ಬ್ರಹ್ಮಸಮಾಜದಲ್ಲಿ ಕೆಲಸಕ್ಕೆ ಒಪ್ಪಿಕೊಂಡಿದ್ದೇನೆ.''

### ಸ್ವಾತಂತ್ರ್ಯದ ಮಹತ್ವ

**ಶ್ರೀರಾಮಕೃಷ್ಣರು:** ''ಕಾಮಕಾಂಚನ ಮನುಷ್ಯನನ್ನು ಬಂಧಿಸಿ ಆತನ ಸ್ವಾತಂತ್ರ್ಯವನ್ನು ಕಸಿದುಕೊಂಡುಬಿಡುತ್ತದೆ. ಕಾಮದ ದೆಸೆಯಿಂದಲೇ ಕಾಂಚನ ಬೇಕಾಗುತ್ತದೆ. ಕಾಮದ ದೆಸೆಯಿಂದಲೇ ಪರರ ದಾಸ್ಯತ್ವಕ್ಕೆ ಇಳಿದು ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಆಗ ಸ್ವತಂತ್ರ ಇಚ್ಛೆಯಂತೆ ಏನನ್ನೂ ಮಾಡಲಾಗುವುದಿಲ್ಲ.'' *(ಅಲ್ಲೇ, ಪು. ೧೨೪-೨೫).*

ಇಲ್ಲಿ ಒಂದು ಪ್ರಶ್ನೆ ಏಳಬಹುದು, ವಿಜಯಕೃಷ್ಣ ಗೋಸ್ವಾಮಿಯು ಸ್ವಾತಂತ್ರ್ಯದ ನೆಪದಲ್ಲಿ ಬ್ರಹ್ಮಸಮಾಜಕ್ಕೆ ಅವಿಧೇಯನಾಗಿ ವರ್ತಿಸಬೇಕೆ? ಅವಿಧೇಯತೆ ಸ್ವಾತಂತ್ರ್ಯವಲ್ಲ, ಇದು ಆಂತರಿಕ ಗುಲಾಮತನದ ಅಭಿವ್ಯಕ್ತಿ. ಅಂಥವನು ಅಹಂಕಾರಾದಿಗಳಿಗೆ ಗುಲಾಮನಾಗಿರುತ್ತಾನೆ. ಇಲ್ಲಿ ಶ್ರೀರಾಮಕೃಷ್ಣರು, ಕಾಮಕಾಂಚನಾಸಕ್ತರಾಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ ಎಂಬುದನ್ನು ಸಾಮಾನ್ಯರ ದೃಷ್ಟಿಯಿಂದ ಹೇಳುತ್ತಿದ್ದಾರೆ. ಸಾಮಾನ್ಯ ಜನರು ಬಾಹ್ಯ ಸ್ವಾತಂತ್ರ್ಯವನ್ನು ಬಯಸುತ್ತಾರೆ, ಎಲ್ಲರ ಮೇಲೂ ತಮ್ಮ ಅಧಿಕಾರವನ್ನು ಚಲಾಯಿಸಲು ಬಯುಸುತ್ತಾರೆ, ಆದರೆ ಆಂತರಿಕವಾಗಿ ತಾವೆಷ್ಟು ಮನೋದೌರ್ಬಲ್ಯಗಳಿಗೆ ದಾಸರಾಗಿರು

ತ್ತಾರೆ ಎಂಬುದನ್ನು ಭಾವಿಸುವುದೇ ಇಲ್ಲ. ಹೊರಗಡೆ ಬಾಸರೂ (boss) ಒಳಗಡೆ ದಾಸರೂ ಆಗಿರುತ್ತಾರೆ.

ನಿಜವಾದ ಸ್ವಾತಂತ್ರ್ಯದ ಮೂರು ಲಕ್ಷಣಗಳಿವೆ: ಸ್ವಶಿಸ್ತು (self discipline) ಜವಾಬ್ದಾರಿ (Responsibility) ಮತ್ತು ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು. ಸ್ವಶಿಸ್ತು ಇಲ್ಲದಿದ್ದರೆ ಸ್ವಾತಂತ್ರ್ಯ ಸ್ವಾತಂತ್ರ್ಯವೇ ಅಲ್ಲ. ಅದು ಸ್ವಚ್ಛಂದ ಪ್ರವೃತ್ತಿಯಾಗುತ್ತದೆ. ಇದಕ್ಕೊಂದು ಉದಾಹರಣೆಯನ್ನು ನಾನೊಂದು ಪುಸ್ತಕದಲ್ಲಿ ಓದಿದ್ದೇನೆ. ಮಕ್ಕಳು ಗಾಳಿಪಟ ಹಾರಿಸುತ್ತಾರೆ. ಅದರ ದಾರವನ್ನು ಅವರು ಕೈಯಲ್ಲಿ ಹಿಡಿದಿರುತ್ತಾರೆ, ಹಾಗೂ ಅದನ್ನು ಸಡಿಲವಾಗಿಯೂ ಬಿಡುತ್ತಾರೆ. ಆಗ ಗಾಳಿಪಟ ಮೇಲೆ ಮೇಲೆ ಹಾರುತ್ತಾ ಹೋಗುತ್ತದೆ. ದಾರ ಕೈ ತಪ್ಪಿದರೆ, ಅಥವಾ ಕಡಿದು ಹೋದರೆ ಪಟವು ಎಲ್ಲೋ ಒಂದು ಕಡೆ ಬಿದ್ದು ಹರಿದುಹೋಗುತ್ತದೆ. ದಾರವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದು ಸ್ವಶಿಸ್ತು, ಪಟವು ಮೇಲೆ ಮೇಲೆ ಹಾರುವುದು ಸ್ವಾತಂತ್ರ್ಯ. ಹೀಗೆ ಸ್ವಾತಂತ್ರ್ಯವು ಸ್ವಶಿಸ್ತಿನಿಂದ ಕೂಡಿರಬೇಕು. ಆಗಲೇ ಅದಕ್ಕೆ ಬೆಲೆ.

ಇನ್ನೊಂದು ಅತಿ ಮುಖ್ಯ ಲಕ್ಷಣ, ಜವಾಬ್ದಾರಿಯ ಪ್ರಜ್ಞೆ– ವೈಯಕ್ತಿಕ ಮತ್ತು ಸಾಮಾಜಿಕ. ತಾನೇನಾಗಿರುವೆನೋ ತಾನು ಏನು ಮಾಡುತ್ತಿರುವೆನೊ ಅದಕ್ಕೆಲ್ಲ ತಾನೇ ಜವಾಬ್ದಾರ ಎಂಬ ಇಡೀ ಜವಾಬ್ದಾರಿಯನ್ನು ತಾನೇ ಭರಿಸಿಕೊಳ್ಳುವ ತಾಕತ್ತು, ಅಂತಃಶಕ್ತಿ. ಸ್ವಾಮಿ ವಿವೇಕಾನಂದರು ಇದರ ಬಗ್ಗೆ ತುಂಬ ಪ್ರಭಾವಶಾಲಿಯಾಗಿ ಹೇಳುತ್ತಾರೆ: ''ನಾವೇ ಎಲ್ಲಕ್ಕೂ ಹೊಣೆಗಾರರಾದಾಗ ಮಾತ್ರ ನಮಗೆ ಅತಿ ಶ್ರೇಷ್ಠವಾದ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ... ಜವಾಬ್ದಾರಿ ನಮ್ಮನ್ನು ಬದಲಾಯಿಸುವುದು. ನಾವೇ ಎಲ್ಲಕ್ಕೂ ಎಂದು ಹೊಣೆಗಾರರಾಗುವೆವೋ ಆಗ ನಮ್ಮ ಅತಿ ಶ್ರೇಷ್ಠ ಶೀಲ ವ್ಯಕ್ತವಾಗುತ್ತದೆ. ನಾವು ಮತ್ತಾರನ್ನೂ ಎಳೆಯದೇ ಇರುವಾಗ, ದೂರುವುದಕ್ಕೆ ಮತ್ತಾವ ದೈವವೂ ಇಲ್ಲದೆ ಇರುವಾಗ, ನಮ್ಮ ಹೊರೆಯನ್ನು ಹೊರುವುದಕ್ಕೆ ಯಾವ ಸಾಕಾರ ದೇವರೂ ಇಲ್ಲದೆ ಇರುವಾಗ, ನಾವೇ ಎಲ್ಲಕ್ಕೂ ಹೊಣೆಗಾರರಾದಾಗ, ನಾವು ನಮ್ಮ ಶೀಲದ ಭವ್ಯ ಶಿಖರಕ್ಕೆ ಏರುವೆವು. ನನ್ನ ಅದೃಷ್ಟಕ್ಕೆ ನಾನೇ ಹೊಣೆ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨.೧೩೨)*

ಮೂರನೆಯ ಲಕ್ಷಣ, ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು. ತನ್ನಂತೆಯೇ ಇತರರೂ ಸ್ವತಂತ್ರರು, ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ವರ್ತಿಸಬೇಕು – ಹೀಗೆ ತನ್ನ ವ್ಯಕ್ತಿತ್ವದ ಪರಿಧಿಯನ್ನು ಮೀರಿ ಬೆಳೆಯುವ, ಆಲೋಚಿಸುವ ಸಾಮರ್ಥ್ಯ ಇರಬೇಕು. ಇಲ್ಲದಿದ್ದರೆ ಸ್ವಾತಂತ್ರ್ಯ ಅತಂತ್ರವಾಗುತ್ತದೆ. ''ಇತರರ ಸ್ವಾತಂತ್ರ್ಯವನ್ನು ಗೌರವಿಸದವನು ನಿಜವಾಗಿಯೂ ಸ್ವಾತಂತ್ರ್ಯಕ್ಕೆ ಅರ್ಹನಲ್ಲ'' ಎನ್ನುತ್ತಾರೆ ಸ್ವಾಮೀಜಿ. ಒಂದು ಹಾಸ್ಯಪ್ರಸಂಗ: ಒಬ್ಬನು ತನ್ನ ದೊಣ್ಣೆಯನ್ನು ಮನಬಂದಂತೆ ಬೀಸುತ್ತ ಬೀದಿಯಲ್ಲಿ ಹೋಗುತ್ತಿದ್ದನಂತೆ. ಮುಂದಿನಿಂದ ಬರುತ್ತಿದ್ದ ವ್ಯಕ್ತಿಗೆ ಅದು ತಾಗಿತಂತೆ. ಆ ವ್ಯಕ್ತಿ ಕೋಪದಿಂದ ''ನನ್ನ ಮೂಗನ್ನು ಹೊಡೆಯುವುದಕ್ಕೆ ನಿನಗೆಷ್ಟು ಧೈರ್ಯ!'' ಎಂದು ಗುಡುಗಿದ. ಉತ್ತರವಾಗಿ ದೊಣ್ಣೆನಾಯಕನು ಹೇಳಿದ, ''ನೀನಾರೋ ಕೇಳುವುದಕ್ಕೆ? ನಾನು ಸ್ವತಂತ್ರ, ಏನು ಬೇಕಾದರೂ ಮಾಡುತ್ತೇನೆ'' ಎಂದು. ''ಅದು ಸರಿ, ನಿನ್ನ ಸ್ವಾತಂತ್ರ್ಯ ನನ್ನ ಮೂಗಿನವರೆಗೆ ಮಾತ್ರ'' ಎಂದು ನಾಸಪೀಡಿತ ವ್ಯಕ್ತಿ ಹೇಳಿದ.

''ದಾಸನಾಗಿ ಸ್ವರ್ಗದಲ್ಲಿ ವಾಸಿಸುವುದಕ್ಕಿಂತ ನರಕದಲ್ಲಿ ಸ್ವತಂತ್ರವಾಗಿ ಇರುವುದೇ ಲೇಸು'' ಎಂಬ ಹೇಳಿಕೆ ಸ್ವಾತಂತ್ರ್ಯದ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ. ಫ್ರಾಂಕ್ಲಿನ್ ರೂಸ್‌ವೆಲ್ಟ್ ಅವರ ಮಾತೂ ಇಲ್ಲಿ ಸ್ಮರಣಾರ್ಹ: ''ಮಂಡಿಯೂರಿ ಮೊಳಕಾಲ ಮೇಲೆ ಜೀವಿಸುವುದಕ್ಕಿಂತ ನಮ್ಮ ಕಾಲ ಮೇಲೆ ನಿಂತು ಸಾಯುವುದೇ ಲೇಸು.''

### ಲೆಕ್ಚರ್ ಹುಚ್ಚು

ಶ್ರೀರಾಮಕೃಷ್ಣರು: ''ನೋಡು, ಆಚಾರ್ಯನ ಕೆಲಸ ಬಹಳ ಕಠಿಣವಾದದ್ದು. ಭಗವಂತನಿಂದ ನೇರವಾಗಿ ಆದೇಶ ಬಾರದ ಹೊರತು ಲೋಕಶಿಕ್ಷಣ ಸಾಧ್ಯವಿಲ್ಲ. ಆದೇಶವಿಲ್ಲದೆ ಉಪದೇಶ ಕೊಟ್ಟದ್ದೇ ಆದರೆ ಯಾರೂ ಕಿವಿಗೊಡರು. ಅಂಥ ಉಪದೇಶಗಳಲ್ಲಿ ಯಾವ ಶಕ್ತಿಯೂ ಇರದು. ಸಾಧನೆಯಿಂದಾಗಲಿ ಅಥವಾ ಬೇರೆ ಯಾವ ಮಾರ್ಗದಿಂದಾಗಲಿ ಮೊದಲು ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬೇಕು. ಬಳಿಕ ಆತನ ಆದೇಶವನ್ನು ಪಡೆದುಕೊಂಡು ಲೆಕ್ಚರ್ ಕೊಡಬೇಕು.'' *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೨೭)*

ಅನೇಕರು ಲೆಕ್ಚರ್ ಕೊಡುತ್ತಾರೆ, ಅವರೆಲ್ಲರಿಗೂ ಭಗವಂತನ ಆದೇಶವಾಗಿದೆಯೇ ಎಂಬ ಪ್ರಶ್ನೆ ಸ್ವಾಭಾವಿಕ. ಕೆಲವರಾದರೂ ಲೆಕ್ಚರ್ ಕೊಡುವುದು ತಮ್ಮನ್ನು ಮೆರೆಸುವುದಕ್ಕಾಗಿ ಅಲ್ಲ. ಸಾಂದರ್ಭಿಕವಾಗಿ ತಮ್ಮ ಪಾಲಿಗೆ ಬಂದ ಕರ್ತವ್ಯ ನಿರ್ವಹಣೆಗಾಗಿ. ನಮ್ಮ ಸಂಘದ ದೃಷ್ಟಿಯಿಂದ ನೋಡಿದರೆ, ಶ್ರೀರಾಮಕೃಷ್ಣರಿಂದ ಸ್ವಾಮಿ ವಿವೇಕಾನಂದರಿಗೆ ಆದೇಶವಾಗಿದೆ, ಹಾಗೂ ಸ್ವಾಮಿ ವಿವೇಕಾನಂದರಿಂದ ಇತರರಿಗೆ ಆದೇಶವಾಗಿದೆ. ಈ ಆದೇಶವನ್ನು ಪಾಲಿಸುತ್ತಿದ್ದೇವೆ ಎಂಬ ಮನೋಭಾವದಿಂದ ಲೆಕ್ಚರ್ ಕೊಡಬೇಕೇ ಹೊರತು, ಆಚಾರ್ಯನಂತೆ ಅಲ್ಲ.

ಬೋಧನೆಯ ಮೂಲಕ ಇತರರಿಗೆ ಸಹಾಯ ಮಾಡಬಹುದು. ಆಧ್ಯಾತ್ಮಿಕವಾಗಿ ಆತ್ಯಂತಿಕ ಸಿದ್ಧಿಯನ್ನು ಪಡೆದ ಮೇಲೆಯೇ ಬೋಧಿಸಬೇಕೆಂದೇನೂ ಇಲ್ಲ. ಸಾಧಕರಾಗಿರುವವರೂ ತಮ್ಮ ತಮ್ಮ ಅನುಭವದ ಆಧಾರದ ಮೇಲೆ ಪರಸ್ಪರ ವಿಚಾರ ವಿನಿಮಯದ ಮೂಲಕ ಪರಸ್ಪರ ಸಹಾಯಕರಾಗಬಹುದು. ಅನೇಕರು ನೀರಿನಲ್ಲಿ ಮುಳುಗಿರುವಾಗ ಈಜು ಬರುವವರು ಇತರರಿಗೆ ನೀರಿನಿಂದ ಹೊರಬರಲು ಸಹಾಯ ಮಾಡಬಹುದು. ಕೈಕಾಲು ಕಟ್ಟಿ ಹಾಕಲ್ಪಟ್ಟಿರುವವರು ಅದರಿಂದ ಬಿಡಿಸಿಕೊಳ್ಳಲು ಪರಸ್ಪರ ಸಹಾಯ ಮಾಡಬಹುದು. *(ಮುಂದುವರಿಯುವುದು)*